ಅಂಟಿಕೊಂಡಿದ್ದ ಗನ್ ಹೌಸ್ ಸರ್ಕಲ್‌ನಲ್ಲಿದ್ದರು. ಜೀಪಿನಿಂದ ಸ್ವಲ್ಪ ದೂರ ಎಸ್‌ಐ ಒಬ್ಬರ ಜೊತೆ ಮಾತನಾಡುತ್ತಾ ನಿಂತಿದ್ದ ಅವರನ್ನು ನೋಡಿ, ಮಾದೇಶ ಮೆಲ್ಲಗೆ ಜೀಪಿನ ಬಳಿ ಬೈಕ್ ನಿಲ್ಲಿಸಿ ಅಯ್ಯಿಂನೊಂದಿಗೆ ಮಾತಿಗಿಳಿದ.

"ಏನ್ ಪ್ರಾಬ್ಲಂ, ಅಯ್ಯಿಂಣ್ಣೋ?"

"ಯೇ... ಅದೇ ನಂಜಗೂಡಿನಲ್ಲಿರೋ ಔಷಧಿ ಫ್ಯಾಕ್ಟರೀಲಿ ಐದಾರು ಮಂದಿಗೆ ಕೋವಿಡ್ ಇದ್ಯಂತೆ. ಬರೋಬರಿ ಎಂಟು ನೂರು ಮಂದಿಗೆ ರೋಗ ಇರ್ಬೋದಂತೆ. ಅದಕ್ಕೆ ಡಿಸಿ ಹೇಳವರೆ ನಂಜನಗೂಡಿನ ರಸ್ತೆಗಳೆಲ್ಲಾ ಬಂದ್ ಮಾಡಿ ಅಂತ. ಇರುವೆ ಕೂಡ ಅಲ್ಲಿಗೆ ಹೋಗಬಾರದಂತೆ. ಮೊದಲು ವೋಗಿ ಸಾಹೇಬ್ರನ್ನ ಮಾತಾಡಿಸು. ಭಾಳ ಗರಂ ಆಗವರೆ" ಅಂದ.

ಮಾದೇಶ ಬೈಕ್ ಅಲ್ಲೇ ಬಿಟ್ಟು, ಲಾಠಿ ಹಿಡಿದುಕೊಂಡು, ಕ್ಯಾಪ್ ಸರಿಮಾಡಿಕೊಂಡು ರಾಜಪ್ಪರ ಮುಂದೆ ಸೆಲ್ಯೂಟ್ ಹೊಡೆದು ನಿಂತ.

"ಯೂ ಯೂಸಲೆಸ್ ಪಕ್ಡ್ ಪೆಲೋ... ಎಷ್ಟೋ ಫೋನ್ ಮಾಡೋದು ನಿನಗೆ. ಇಲ್ಲಿ ಅತ್ತಕೊಂಡು ಉರಿತಿದೆ. ಅಲ್ಲಿ ಮನೇಲಿ ಕೂತ್ಕೊಂಡು ತರೀತಿದ್ದ, ಕುಕೆಡ್ ಪೆಲೋ."

ರಾಜಪ್ಪರ ಕೋಪದ ಬಗ್ಗೆ ಯೋಚಿಸಲು ಹೋಗದ ಮಾದೇಶ ಕುಕೆಡ್ ಪೆಲೋ ಪದದ ಹಿಂದೆ ಬಿದ್ದ. ಒಂದೆರಡು ಗಳಿಗೆ ಕಳೆದು ಗೊತ್ತಾಯಿತು 'ಕ್ರೂಕೆಡ್ ಫೆಲೋ'. ಸ್ವಲ್ಪ ನಿರಾಳವಾದ ಮಾದೇಶ ಅವರ ಪಕ್ಕ ಸರಿದು ನಿಂತ.

"ರೀ, ಒಬ್ಬರೂ ಈ ಕಡೆಯಿಂದ ಆ ಕಡೆಗೆ ಹೋಗ್ಬಾರದು ಕಣ್ರೀ. ಅರ್ಥವಾಯ್ತಾ" ಎಂದು ಎಸ್‌ಐಗೆ ಹೇಳಿ ಅಲ್ಲಿಂದ ಹೊರಟರು. ಆ ಎಸ್‌ಐ ಇವರಿಗೆ ಒಂದು ಸೆಲ್ಯೂಟ್ ಹೊಡೆದ ಅಲ್ಲಿಂದ ದೂರ ಸರಿದ.

"ಯೇ ಮಾದೇಸ, ನಿನ್ನ ಬೈಕ್‌ನ ಅಲ್ಲೇ ಆ ಕಾಡಾ ಆಫೀಸಿನೊಳಗೆ ಇಟ್ಟು ಬಾರೋ" ಎಂದು ಜೀಪು ಹತ್ತಿದರು. ಮಾದೇಶ ಬೈಕ್ ಹತ್ತಿ ಕಾಡಾ ಆಫೀಸಿನೊಳಗೆ ನಿಲ್ಲಿಸಿ ಜೀಪು ಹತ್ತಿ ಹೊರಟ. ಜೀಪು ಕಾಡಾ ಕಚೇರಿಯನ್ನು ಬಳಸಿಕೊಂಡು ನೂರಡಿ ರಸ್ತೆಯಲ್ಲಿ ಸಾಗುತ್ತಾ ರಾಮಸ್ವಾಮಿ ಸರ್ಕಲ್ ಕಡೆ ಹೊರಳಿತು. ಅಲ್ಲಿಂದ ಜೀಪು ಬಲ್ಲಾಳ್ ಸರ್ಕಲ್ ದಾಟಿಕೊಂಡು ಎಚ್.ಡಿ. ಕೋಟೆ ರಸ್ತೆ ಕಡೆಗೆ ದಾಟಿತು. ಅಲ್ಲಲ್ಲಿ ಬೀಟ್ ತಂಡಗಳು ಇದ್ದವು. ಕೊನೆಗೆ ಜೀಪು ರಿಂಗ್ ರೋಡ್ ತಲುಪಿತು. ಸದಾ ಬಿಜಿಯಾಗಿರುತ್ತಿದ್ದ ಕೋಟೆ ರಸ್ತೆ ಖಾಲಿಯಿತ್ತು.

ಜೀಪು ನಿಂತ ಮೇಲೆ, ಮನೆಯಿಂದ ಮತ್ತೆ ಫೋನು ಬಂತು. ಕೂಡಲೆ ಜೀಪಿನಿಂದ ಕೆಳಗಿಳದ ಮಾದೇಶ, ಅದರ ಹಿಂಭಾಗಕ್ಕೆ ಹೋಗಿ ನಿಂತು ರಿಸೀವ್ ಮಾಡಿದ. ಆ ಕಡೆಯಿಂದ ಅಮ್ಮ ಒಂದೇ ಉಸುರಿಗೆ, "ಮಾದೇಶ, ಅಪ್ಪನಿಗೆ ಮತ್ತೆ ಉಸಾರಿಲ್ಲ ಕಣ್ಲಾ. ಉಸಿರಾಡೋಕೆ ಕಷ್ಟ ಆಗ್ತಿದೆ" ಎಂದರು.

"ಓ ಚಿಕ್ಕಪ್ಪ ಮನೆಲೇ ಇದ್ದಾರಾ?"

"ಹೌದು."

ಅವರಿಗೆ ಫೋನ್ ಕೊಡು ಎಂದು ಹೇಳಿ, "ಚಿಕ್ಕಪ್ಪಾ, ನೀವು ಮತ್ತೆ ರಂಗಪ್ಪ ಡಾಕ್ಟರ್ ಅವರನ್ನೇ ನೋಡಿ. ಅಲ್ಲೇ ಇರಿಸಿ ಡ್ರಿಪ್ಸ್ ಹಾಕ್ಸೊಂಡು ಬನ್ನಿ. ನಾನೀಗ ಡ್ಯೂಟಿ ಮೇಲಿದ್ದೀನಿ. ಸಂಜೆ ಮೇಲೆ ಮತ್ತೆ ಫೋನ್ ಮಾಡ್ತೀನಿ. ದುಡ್ಡಿದೆ ತಾನೆ?" ಎಂದು ಚಿಕ್ಕಪ್ಪನಿಗೆ ಹೇಳಿದ.

"ದುಡ್ಡು ಇದೆ ಕಣೋ ಮಾದೇಶ. ನೀನ್ ಆರಾಮಾಗಿ ಡ್ಯೂಟಿ ಮಾಡು. ಬೇಡಂದ್ರೂ ಕೇಳದೆ, ನಿಮ್ಮಮ್ಮನೇ ನಿನಗೆ ಫೋನು ಮಾಡಿದ್ದು" ಚಿಕ್ಕಪ್ಪ ಫೋನು ಇಟ್ಟರು. ಅವರ ಧೈರ್ಯ ನೋಡಿ ಸಮಾಧಾನ ಆದ್ರೂ ಒಂದ್ಸಾರಿ ಮನೆಗೆ ಹೋಗ್ ಬಂದರೆ ಸರಿ ಅಂತ ಅನ್ನಿಸಿತು ಅವನಿಗೆ. ಆದರೆ ಹೇಗ್ ಕೇಳೋದು? ಅದೂ ಈ ಸಮಯದಲ್ಲಿ? ಈ ರಾಜಪ್ಪನಿಗೆ ಆ ಎಸ್‌ಪಿ ಭಯ. ಜೊತೆಯಲ್ಲಿ